ಕರ್ನಾಟಕ ಸರ್ಕಾರ

## ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ

## ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/ 59/2015–16**

---

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

---

| ವಾದಿಗಳು | ಪ್ರತಿವಾದಿಗಳು |
|---|---|
| 4) ಶ್ರೀಮತಿ ಚಿಲುಗೋಡು ಹುಲಿಗೆಮ್ಮ<br>ಗಂಡ ಮಹಾಲಿಂಗಪ್ಪ<br>ಗ್ರಾಮ : ಜಿ. ಕೋಡಿಹಳ್ಳಿ. | 1) ಶ್ರೀ ಕುರಿ॥ ಲೋಕೇಶ<br>ತಂದೆ ಶೇಖ್ರಪ್ಪ<br>ಗ್ರಾಮ : ಯಡ್ರಾಮನಹಳ್ಳಿ<br>2) ಶ್ರೀ ಯಂ. ಕೊಟ್ರೇಶ<br>ನ್ಯಾಯವಾದಿಗಳು,<br>ಹಗರಿಬೊಮ್ಮನಹಳ್ಳಿ. |

---

ವಿಷಯ : – **ಹಗರಿಬೊಮ್ಮನಹಳ್ಳಿ ತಾಲೂಕು ಸೊನ್ನ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 85/ಅ ವಿಸ್ತೀರ್ಣ 4–50 ಎಕರೆ ಜಮೀನು ನೊಂದಾಯಿತ ವಿಲ್ ದಸ್ತಾವೇಜು ಸಂಖ್ಯೆ 01/ದಿನಾಂಕ: 06–04–2013 ರಂತೆ ವಾದಿಗಳ ಹೆಸರಿನಲ್ಲಿ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು –ವಿಚಾರಣೆ.**

---

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಸೊನ್ನ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 85/ಅ ವಿಸ್ತೀರ್ಣ 4–50 ಎಕರೆ ಜಮೀನು ನೊಂದಾಯಿತ ವಿಲ್ ದಸ್ತಾವೇಜು ಸಂಖ್ಯೆ 01/ ದಿನಾಂಕ: 06–04–2013 ರಂತೆ ಹಾಲೀ ಪಹಣಿ ದಾಖಲು ಹಕ್ಕುದಾರರಾದ ಶ್ರೀಮತಿ ಕುರಿ ಭರಮವ್ವ ಗಂಡ ದಿ॥ ನಾಗಪ್ಪ ಇವರಿಂದ ವಾದಿಗಳಿಗೆ ವಿಲ್ ನಾಮದಸ್ತಾವೇಜು ನೋಂದಣಿಯಾಗಿರುತ್ತದೆ, ವಿಲ್‌ನಾಮ ದಸ್ತಾವೇಜು ಬರೆದುಕೊಟ್ಟವರು ದಿನಾಂಕ:02–02–2016 ರಂದು ಮರಣ ಹೊಂದಿರುತ್ತಾರೆ. ಮರಣ ಹೊಂದಿದ ಪ್ರಯುಕ್ತ ವಾದಿಗಳು ತಾಲೂಕಾ ಭೂಮಿ ಕೇಂದ್ರದಲ್ಲಿ ತಮ್ಮ ಹೆಸರಿನಲ್ಲಿ ಹಕ್ಕು ವರ್ಗಾವಣೆ ಹೊಂದಲು ನಿಗದಿತ ನಮೂನೆಯೊಂದಿಗೆ ಅರ್ಜಿ ಮಾಡಿಕೊಂಡಿರುತ್ತಾರೆ. ಅರ್ಜಿಯ ಪ್ರಕಾರ ತಾಲೂಕಾ ಭೂಮಿ ಕೇಂದ್ರದಲ್ಲಿ ವಹಿವಾಟು ಸಂಖ್ಯೆ 86 ಹಾಗೂ ಹಕ್ಕು ಬದಲಾವಣೆ ಸಂಖ್ಯೆ ಹೆಚ್ 36/2015–16 ರಂತೆ ಹಕು ಬದಲಾವಣೆ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನೆಯಾಗಿರುತ್ತದೆ. ಸದರಿ ನೋಟೀಸುಗಳನ್ನು ಗ್ರಾಮ ಲೆಕ್ಕಾಧಿಕಾರಿ ಸೊನ್ನ ಇವರ ದ್ವಾರ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ನೋಟೀಸುಗಳನ್ನು ಜಾರಿ ಮಾಡಲಾಗಿ

ಸದರಿ ಪ್ರಕರಣಕ್ಕೆ ಪ್ರತಿವಾದಿಗಳು ತಾಲೂಕಾ ಭೂಮಿಕೇಂದ್ರದಲ್ಲಿ ತಕರಾರು ಸ್ವೀಕೃತಿ ಸಂಖ್ಯೆ 6622/2015-16 ರಂತೆ ತಮ್ಮ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಹೋಬಳಿ ಇವರು ಸದರಿ ಪ್ರಕರಣವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿ:05-04-2016 ರಿಂದ ದಿನಾಂಕ: 19-05-2016 ರವರೆಗೆ ವಿಚಾರಣೆ ನಡೆಸಲಾಯಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳ ಪರವಾಗಿ ಶ್ರೀಯುತ ಯು.ಕೊಟ್ರೇಶ ನ್ಯಾಯವಾದಿಗಳು ಇವರನ್ನು ನೇಮಕ ಮಾಡಿಕೊಂಡಿದ್ದು ಪೂರಕವಾಗಿ ನ್ಯಾಯವಾದಿಗಳ ವಕಾಲತ್ ವಹಿಸಿಕೊಂಡು ತಮ್ಮ ಲಿಖಿತ ವಾದ ಮಂಡಿಸಿರುತ್ತಾರೆ. ವಾದವನ್ನು ಪರಿಶೀಲಿಸಲಾಗಿ ವಿವಾದಿತ ಆಸ್ತಿಯು ವಾದಿ ಮತ್ತು ಪ್ರತಿವಾದಿಗಳ ಹಿಂದೂ ಅವಿಭಕ್ತ ಕುಟುಂಬದ ಆಸ್ತಿಯಾಗಿರುವುದಾಗಿ ಪ್ರತಿವಾದಿಯ ಅಜ್ಜನಾದ ಕುರಿ॥ನಿಂಬಪ್ಪನ ಮಾಲಿಕತ್ವದ ಆಸ್ತಿಯಾಗಿರುವುದಾಗಿ ನಿಂಬಪ್ಪನ ಮರಣಾ ನಂತರ ಕುಟುಂಬದ ಹಿರಿಯರಾದ ಮತ್ತು ಆತನ ಹೆಂಡತಿಯಾದ ಕುರಿ ಭರಮವ್ವಳ ಹೆಸರಿನಲ್ಲಿ ಹಕ್ಕು ಬದಲಾವಣೆಯಾಗಿರುತ್ತದೆಂದು ಇದಕ್ಕೆ ಸಂಬಂಧಿಸಿದ ಕುಟುಂಭದ ಸದಸ್ಯರೆಲ್ಲರೂ ಮಾಲೀಕತ್ವದ ಹಕ್ಕನ್ನು ಹೊಂದಿದವರಾಗಿರುತ್ತಾರೆಂದು ಹಾಗೂ ಪ್ರತಿವಾದಿ ಹಾಗೂ ಆತನ ಸದಸ್ಯರಿಗೆ ಗೊತ್ತಾಗದಂತೆ ಹಾಗೂ ಆಸ್ತಿಯ ಮೇಲಿನ ಹಕ್ಕನ್ನು ವಿಫಲಗೊಳಿಸುವ ದುರುದ್ದೇಶದಿಂದ ದಿನಾಂಕ: 06-04-2013 ರಂದು ವಿಲ್‌ನಾಮ ದಸ್ತಾವೇಜು ಮಾಡಿರುವುದಾಗಿ ಮತ್ತು ವಿಲ್ ಬರೆಸಿಕೊಟ್ಟ ಕುರಿ ಭರಮವ್ವ ಇವರು ವೃದ್ಧಾಪ್ಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವುದಾಗಿಯೂ ಹಾಗೂ ಸರಿಯಾಗಿ ಕಣ್ಣು ಕಾಣುತ್ತಿಲ್ಲವೆಂದೂ, ಇಂಥಾ ಸಂದರ್ಭವನ್ನು ಉಪಯೋಗಿಸಿಕೊಂಡು ವಾದಿಯು ಜಮೀನನ್ನು ಕಬಳಿಸಬೇಕೆಂಬ ದುರುದ್ದೇಶದಿಂದ ವಿಲ್‌ನಾಮ ದಸ್ತಾವೇಜು ಹೊಂದಿರುವುದು ಸಂಪೂರ್ಣ ಹಕ್ಕು ಅಧಿಕಾರವಿಲ್ಲವೆಂದೂ, ಭರಮವ್ವಳಿಗೆ ಅರಿವಿಲ್ಲದಂತೆ ಮೋಸದಿಂದ ಸೃಷ್ಟಿಸಿಕೊಂಡ ವಿಲ್ ನಾಮದಸ್ತಾವೇಜು ಆಗಿರುವುದರಿಂದ ವಾದಿಯ ಅರ್ಜಿಯನ್ನು ತಿರಸ್ಕರಿಸುತ್ತ ಸೂಕ್ತ ಪ್ರಾಧಿಕರಕ್ಕೆ ಶಿಫಾರಸ್ಸು ಮಾಡಬೇಕೆಂದು ನ್ಯಾಯವಾದಿಗಳು ತಮ್ಮ ಲಿಖಿತ ವಾದವನ್ನು ಪ್ರತಿವಾದಿಗಳ ಪರವಾಗಿ ಮಂಡಿಸಿರುತ್ತಾರೆ.

ವಾದಿಗಳ ಪರವಾಗಿ ಯಾರೂ ನ್ಯಾಯವಾದಿಗಳು ಇರುವುದಿಲ್ಲ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ ವಿಲ್‌ನಾಮ ದಸ್ತಾವೇಜು ಮಾಡಿಸಿಕೊಟ್ಟಿರುವ ಶ್ರೀಮತಿ ಕುರಿ ಭರಮವ್ವ ಗಂಡ

ನಾಗಪ್ಪ ಇವರು ಹೊಂದಿರುವ ಪಹಣಿ ಪರಿಶೀಲಿಸಲಾಗಿ, ಶ್ರೀಮತಿ ಕುರಿ ಭರಮವ್ವ ಗಂಡ ನಾಗಪ್ಪ ಇವರಿಗೆ ಹಕ್ಕು ಬದಲಾವಣೆ ಸಂಖ್ಯೆ 19/1978-79/ದಿನಾಂಕ: 29-09-1978 ರಿಂದ ಹಕ್ಕು ಪ್ರಾಪ್ತವಾಗಿರುವುದು ಹಾಜರುಪಡಿಸಿರುವ ಪಹಣಿ ದಾಖಲಾತಿ ಕಂಡು ಬಂದಿರುತ್ತದೆ. ಹಾಗೂ 1978-79 ರಿಂದ ಈವರೆಗೂ ಕುರಿ ಭರಮವ್ವ ಗಂಡ ನಾಗಪ್ಪ ಇವರೇ ಹಕ್ಕುದಾರರಾಗಿದ್ದು ಈ ಹಕ್ಕು ಆಧಾರದ ಮೇಲೆ ವಿಲ್‌ನಾಮ ದಸ್ತಾವೇಜು ಸಂಖ್ಯೆ 01/ ದಿನಾಂಕ: 06-04-2013 ರಂದು ತನ್ನ ಮಗಳಾದ ವಾದಿಗೆ ವಿಲ್ ನೊಂದಣಿ ಮಾಡಿಸಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ. ವಿಲ್‌ನಾಮ ದಸ್ತಾವೇಜು ಬರೆಸಿಕೊಟ್ಟವರು ದಿ:2/2/2016 ರಂದು ಮರಣ ಹೊಂದಿರುವುದರಿಂದ ವಾದಿಯು ತನ್ನ ಹೆಸರಿಗೆ ಹಕ್ಕು ವರ್ಗಾವಣೆ ಹೊಂದಲು ಅರ್ಜಿ ಮಾಡಿಕೊಂಡಿರುತ್ತಾರೆ. ಅರ್ಜಿಯು ನಿಯಮಾನುಸಾರ ಕ್ರಮಬದ್ಧವಾಗಿರುತ್ತದೆ.

ಪ್ರತಿವಾದಿಗಳು ವಿವಾದಿತ ಜಮೀನು ಹಿಂದೂ ಅವಿಭಕ್ತ ಕುಟುಂಬ ಆಸ್ತಿಯಾಗಿದ್ದು, ವಾರಸಾ ಪ್ರಕಾರ ನಮಗೆ ಮಾಲಿಕತ್ವ ಹಕ್ಕು ಇರುವುದಾಗಿ ನ್ಯಾಯವಾದಿಗಳ ಮುಖಾಂತರ ತಮ್ಮ ವಾದ ಮಂಡಿಸಿರುವುದರಿಂದ ಪ್ರತಿವಾದಿಗಳು ತಮ್ಮ ಹಕ್ಕನ್ನು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸಿಕೊಂಡು ಇತ್ಯರ್ಥಪಡಿಸಿಕೊಳ್ಳಲು ನಿರ್ದೇಶಿಸುತ್ತ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಸೊನ್ನ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 85/ಅ ವಿಸ್ತೀರ್ಣ 4-50 ಎಕರೆಯನ್ನು ನೊಂದಾಯಿತ ವಿಲ್‌ನಾಮದ ದಸ್ತಾವೇಜು ಪ್ರಕಾರ ಹಾಗೂ ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 128 ಹಾಗೂ 129 ರಡಿಯಲ್ಲಿ ವಾದಿಗಳಾದ ಶ್ರೀಮತಿ ಚಿಲುಗೋಡು ಹುಲಿಗೆಮ್ಮ ಗಂಡ ಮಹಾಲಿಂಗಪ್ಪ, ಜಿ.ಕೋಡಿಹಳ್ಳಿ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 19-5-2016 ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ
ಹಂಪಸಾಗರ

ಪ್ರತಿಯನ್ನು :-

1) ವಾದಿ + ಪ್ರತಿವಾದಿಗಳು
2) ನ್ಯಾಯವಾದಿಗಳು ಶ್ರೀ ಯು. ಕೊಟ್ರೇಶ್ ಇವರಿಗೆ.
3) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ
4) ಹೆಚ್ಚುವರಿ ಪ್ರತಿ ಕಡತಕ್ಕೆ